**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 786/2024**

**ಪಿ.ಡಬ್ಲ್ಯೂಃ 1**

**ಸಾಕ್ಷಿಗೆ ದಿನಾಂಕಃ10.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

1. ಈ ಪ್ರಕರಣವನ್ನು ಗವಿಸಿದ್ದಪ್ಪ ರವರ ವಿರುದ್ದ ಸಲ್ಲಿಸಿದ್ದೆನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ 2022 ರಲ್ಲಿ ನಮ್ಮ ಕಾಲೇಜು ಬಳಿ ಬರುತ್ತಿದ್ದರು ಮತ್ತು ನನ್ನ ಸ್ನೇಹಿತರ ಮೂಲಕ ಅವರ ಪರಿಚಯ ಇರುತ್ತಾರೆ. ಆರೋಪಿ ಮೊದಲು ಹೋಟೆಲ್ ವ್ಯವಹಾರ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿತ್ತು. ನಂತರ ಏನು ಮಾಡುತ್ತಿದ್ದರು ಎಂದು ಗೊತ್ತಿಲ್ಲ. 2022 ರಿಂದ ದಿಃ 01.08.2023 ರ ಅವಧಿಯಲ್ಲಿ ಆರೋಪಿಯನ್ನು ನಾನು ಹಲವಾರು ಬಾರಿ ಭೇಟಿ ಮಾಡಿದ್ದೆನೆ. ಆರೋಪಿಯ ಮನೆ 16 ನೇ ವಾರ್ಡ ಸದಾಶಿವ ನಗರ, ಹಳೆ ಬಿಡಿಸಿಸಿ ಬ್ಯಾಂಕ್ ಹಿಂಭಾಗ, ಸಿರುಗುಪ್ಪದಲ್ಲಿ ಇದೆ ಎಂದರೆ.

2. ನಾನು ಸರ್ಕಾರಿ ಕಾಲೇಜಿನಲ್ಲಿ ಪ್ರಭಾರ ಪ್ರಾಂಶುಪಾಲನಾಗಿ ನಿವೃತ್ತನಾಗಿರುತ್ತೇನೆ. ಈಗ ನಾನು ಖಾಸಗಿ ಶಾಲೆಯನ್ನು ನಡೆಸುತ್ತಿದ್ದೆನೆ. ನಾನು ದಿಃ 28.02.2022 ರಲ್ಲಿ ನಿವೃತ್ತನಾಗಿದ್ದೆನೆ. ಆರೋಪಿಗೆ ನಾನು ಆರ್ ಟಿ ಜಿ ಎಸ್ ಮೂಲಕ 15 ಲಕ್ಷ ಹಣ ಕೊಟ್ಟಿದ್ದೆನೆ. ದಿಃ 31.07.2023 ರಲ್ಲಿ ನಾನು 75 ಸಾವಿರ ಹಣವನ್ನು ಫೋನ್ ಪೇ ಮೂಲಕ ಆರೋಪಿಗೆ ಕೊಟ್ಟಿದ್ದೆನು. ದಿಃ 01.08.2023 ರಂದು 14,25,000 ರೂ ಹಣವನ್ನು ಆರ್ ಟಿ ಜಿ ಎಸ್ ಮೂಲಕ ಕೊಟ್ಟಿದ್ದೆನು. ಆರೋಪಿಯು ತನ್ನ ಮನೆಯ ಖರ್ಚಿನ ಉದ್ದೇಶಕ್ಕಾಗಿ ಹಣವನ್ನು ಪಡೆದಿದ್ದನು. ಆರೋಪಿಯು 5 ಲಕ್ಷ ರೂಪಾಯಿಗೆ ಪ್ರಾಮಿಸರಿ ನೋಟ್ ಬರೆದುಕೊಟ್ಟಿರುತ್ತಾರೆ. ಸದರಿ ಪ್ರಾಮಿಸರಿ ನೋಟ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನೆ. ಸದರಿ ಪ್ರಾಮಿಸರಿ ನೋಟ್ ಗೆ ವಿರೇಶ ಮತ್ತು ತಿಮ್ಮಪ್ಪ ಎನ್ನುವವರು ಸಾಕ್ಷಿದಾರರಾಗಿರುತ್ತಾರೆ.

3. ನನ್ನ ಬಳಿ ನಿವೃತ್ತಿ ಹಣ ಹಾಗೂ ಮನೆ ಕಟ್ಟಲು ಪಡೆದ ಸಾಲದ ಹಣ ಇತ್ತು. ಆದ ಕಾರಣ ನನ್ನ ಬಳಿ 15 ಲಕ್ಷ ಇತ್ತು ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದೂರಿನ ಪ್ಯಾರ ನಂ 5 ನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಪ್ಯಾರಾ ನಂ 5 ರಲ್ಲಿ ಹೇಳಿರುವ ಬಡ್ಡಿ

ಹಣದ ಬಗ್ಗೆ ಆರೋಪಿಯೇ ಹೇಳಿದ್ದರು. ನನ್ನ ಹೆಸರಿನಲ್ಲಿ ಮೂರು ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ ಹಾಗೂ ಸಹಕಾರಿ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ. ಪ್ರಾಮಿಸರಿ ನೋಟ್ ನ್ನು ಜನೇವರಿ 2024 ರಲ್ಲಿ ಬರೆಯಿಸಿಕೊಂಡಿದ್ದೆ. ನಾನು ಆರೋಪಿ ಜೊತೆ 15 ಲಕ್ಷದ ವ್ಯವಹಾರ ಮಾತ್ರ ಮಾಡಿದ್ದೆನೆ. ನಾನು 15 ಲಕ್ಷ ನೀಡಿದ ದಿನ ಆರೋಪಿ ಚೆಕ್ ನೀಡಿರಲಿಲ್ಲ. 15 ಲಕ್ಷ ಹಣ ಕೇಳಲು ಆರೋಪಿ ಮತ್ತು ವಿರೇಶ ಬಂದಿದ್ದರು. ಆರೋಪಿ ಅದಕ್ಕೂ 2-3 ತಿಂಗಳ ಹಿಂದಿನಿಂದಲೂ ನನ್ನ ಬಳಿ ಹಣ ಕೇಳುತಲಿದ್ದರು.

4. ಸಾಮಾನ್ಯ ದೊಡ್ಡ ಮೊತ್ತದ ಹಣವನ್ನು ನೀಡಬೇಕಾದರೆ ದಾಖಲೆಯನ್ನು ಬರೆಯಿಸಿಕೊಳ್ಳುತ್ತಾರೆ ಎಂದರೆ ಸರಿ. ಆರೋಪಿ ಚೆಕ್ ನೀಡುವಾಗ ವಿರೇಶ ಮತ್ತು ತಿಮ್ಮಪ್ಪ ಇದ್ದರು. ಚೆಕ್ಕನ್ನು ನಮ್ಮ ಕಾಲೇಜಿಗೆ ಬಂದು ಕೊಟ್ಟಿದ್ದರು. ಸದರಿ ವಿಚಾರವನ್ನು ದೂರನಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ದಿಃ 01.08.2023 ರಿಂದ 22.12.2023 ರ ಅವಧಿಯಲ್ಲಿ ಆರೋಪಿ ನನಗೆ 10 ಲಕ್ಷ ನೀಡಿದ್ದಾನೆ. ಸದರಿ ಹಣವನ್ನು ಒಂದೇ ಬಾರಿಗೆ ಕೊಟ್ಟಿರಲಿಲ್ಲ. ಕಾಲ ಕಾಲಕ್ಕೆ ಕೊಡುತ್ತಾ ಬರುತ್ತಿದ್ದರು. ಸಾಕ್ಷಿ ಸ್ವ ಇಚ್ಚೆಯಿಂದ ಈ ಪ್ರಕರಣ ಸಲ್ಲಿಸಿದ ನಂತರ ಆರೋಪಿ 1,34,000 ರೂ ಹಣವನ್ನು ನನ್ನ ಎಸ್ ಬಿ ಐ ಮತ್ತು ಎಚ್ ಡಿ ಎಫ್ ಸಿ ವರ್ಗಾವಣೆ ಮಾಡಿರುತ್ತಾರೆ. ಎಚ್ ಡಿ ಎಫ್ ಸಿ ಬ್ಯಾಂಕ್ ಗೆ 48 ಸಾವಿರ ಹಣ ವರ್ಗಾವಣೆ ಮಾಡಿರುತ್ತಾರೆ. ಉಳಿದ ಹಣವನ್ನು ಎಸ್ ಬಿ ಐ ಬ್ಯಾಂಕ್ ಖಾತೆ ವರ್ಗಾವಣೆ ಮಾಡಿರುತ್ತಾರೆ. ಹಣ ವರ್ಗಾವಣೆ ಮಾಡಿದ ಬಗ್ಗೆ ಆರೋಪಿ ನನಗೆ ತಿಳಿಸಿದ್ದರು.

5. ವಿರೇಶ ಮತ್ತು ತಿಮ್ಮಪ್ಪ ನನಗೆ ಮೊದಲಿನಿಂದಲೂ ಪರಿಚಯ ಎಂದರೆ ಸರಿ. ಅವರು ನಾನು ಹೇಳಿದ ಮಾತನ್ನು ಕೇಳುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿ ನೀಡಿದ ಚೆಕ್ಕನ್ನು ಜನವರಿಯಲ್ಲಿ ಮೊದಲು ಬ್ಯಾಂಕ್‌ಗೆ ಸಲ್ಲಿಸಿದ್ದೆ. ಆಗ ಖಾತೆಯಲ್ಲಿ ಹಣ ಇಲ್ಲ ಎಂಬ ಕಾರಣಕ್ಕೆ ಚೆಕ್ಕ ಅಮಾನ್ಯವಾಗಿತ್ತು. ನಂತರ ಆರೋಪಿಗೆ ನಾನು ವಿಚಾರಿಸಿದಾಗ ಆರೋಪಿ ನನಗೆ 85 ಸಾವಿರ ಹಣ ಪಾವತಿ ಮಾಡಿದ್ದರು. ಉಳಿದ ಹಣವನ್ನು ಪಾವತಿ ಮಾಡಲು ಜನವರಿ 31 ರವರೆಗೆ ಕಾಲವಕಾಶ ಕೇಳಿದ್ದರು. ನಂತರ ಪೆಬ್ರವರಿ ತಿಂಗಳಿನಲ್ಲಿ ಅದೇ ಚೆಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದ್ದೆ. ಆ ಬಗ್ಗೆ ನಾನು ದೂರಿನಲ್ಲಿ ಬರೆಯಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿಃ 2 ಹಿಂಬರಹವನ್ನು ಬ್ಯಾಂಕ್ ನವರು ನೀಡಿದ ನಂತರ ನಾನು ಹಲವಾರು ಬಾರಿ ಆರೋಪಿಯನ್ನು ಸಂಪರ್ಕ ಮಾಡಿದ್ದೆ. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

6. ನಾವು ವಕೀಲರ ಮೂಲಕ ಕಳುಹಿಸಿದ ನೋಟಿಸನ್ನು ಆರೋಪಿ ಸ್ವೀಕರಿಸಲಿಲ್ಲ. ನಾನು ನಿಪಿಃ 5 ರಲ್ಲಿನ ವಿಳಾಸದಲ್ಲಿ ಆರೋಪಿಗೆ ನೋಟಿಸ್ ಕಳುಹಿಸಿದ್ದೆನು. ದಿಃ 24.02.2024 ರಂದು ನಾನು

ಆರೋಪಿಗೆ ಕಳುಹಿಸಿದ್ದ ನೋಟಿಸ್ ಹಿಂತಿರುಗಿದ ಎಂದು ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಖಾಲಿ ಚೆಕ್ಕ ಕೊಟ್ಟರು ಎಂದರೆ ಸರಿಯಲ್ಲ. ಚೆಕ್ಕನ್ನು ನಾನೇ ಭರ್ತಿ ಮಾಡಿದ್ದೆನೆ ಎಂದರೆ ಸರಿಯಲ್ಲ. ಆರೋಪಿ ಚೆಕ್ಕನ್ನು ಯಾರ ಬಳಿ ಬರೆಯಿಸಿಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಸಾಲದ ಭದ್ರತೆಗಾಗಿ ಆರೋಪಿ ಚೆಕ್ಕನ್ನು ನೀಡಿದ್ದು ಅದನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ. ನಿಪಿಃ 1 ಚೆಕ್ಕನ್ನು ಇಂಗ್ಲಿಷನಲ್ಲಿ ಬರೆಯಲಾಗಿದೆ. ಚೆಕ್ಕನ ಮೇಲಿರುವ ದಿನಾಂಕವನ್ನು ಆರೋಪಿಯೇ ಬರೆದಿರುತ್ತಾರೆ. ಆರೋಪಿ ಚೆಕ್ಕನ್ನು ನೀಡಿದ ದಿನಾಂಕ ಹೇಳಲಾಗುವುದಿಲ್ಲ. ಆರೋಪಿ 15 ಲಕ್ಷ ರೂಪಾಯಿ ಹಣವನ್ನು ನನ್ನಿಂದ ಸಾಲ ಪಡೆದಾಗ ನೀಡಿದ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ. ಹಣ ಪಾವತಿ ಮಾಡಿದ ನಂತರ ಆರೋಪಿ ಚೆಕ್ಕನ್ನು ವಾಪಸ್ಸ ಕೇಳಿದಾಗ ಅದನ್ನು ನಾನು ಕಳೆದುಹೋಗಿದೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ.

**ಮುಂದುವವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**